## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ೦1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1037 |
| ೦2. | ಮಾನ್ಯ ಸದಸ್ಯರ ಹೆಸರು | : ಹೇಮಲತಾ ನಾಯಕ<br>(ವಿಧಾನಸಭಾ ಕ್ಷೇತ್ರ) |
| ೦3. | ಉತ್ತರಿಸುವ ದಿನಾಂಕ | : 12/03/2026 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 2023 ರಿಂದ 2026 (20.02.2026) ಕಾಣೆಯಾಗಿರುವ ಮಹಿಳೆಯರು ಹಾಗೂ ಬಾಲಕಿಯರ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು; | ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 2023 ರಿಂದ 2026 (20.02.2026) ಕಾಣೆಯಾಗಿರುವ ಮಹಿಳೆಯರು ಹಾಗೂ ಬಾಲಕಿಯರ ಸಂಖ್ಯೆ, ಪತ್ತೆಯಾದವರ ಸಂಖ್ಯೆ, ಪತ್ತೆಯಾಗದೇ ಇರುವ ಪ್ರಕರಣ ಸಂಖ್ಯೆಯ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1 ಮತ್ತು ಅನುಬಂಧ-2ರಲ್ಲಿ** ಒದಗಿಸಲಾಗಿದೆ. |
| ಆ) | ಕಾಣೆಯಾದ ಮಹಿಳೆಯರು ಹಾಗೂ ಬಾಲಕಿಯರ ಪೈಕಿ ಎಷ್ಟು ಜನ ಪತ್ತೆಯಾಗಿದ್ದಾರೆ; ಜಿಲ್ಲಾವಾರು ಮಾಹಿತಿ ಒದಗಿಸುವುದು; | |
| ಇ) | ಇಲ್ಲಿಯವರೆಗೂ ಪತ್ತೆಯಾಗದೇ ಇರುವ ಪ್ರಕರಣಗಳು ಎಷ್ಟು; (ವರ್ಷವಾರು ಹಾಗೂ ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು) | |
| ಈ) | ಪತ್ತೆಯಾಗದೇ ಇರುವ ಪ್ರಕರಣಗಳಲ್ಲಿ ಪತ್ತೆ ಹಚ್ಚಲು ಸರ್ಕಾರ ಯಾವ ರೀತಿಯ ಕ್ರಮವನ್ನು ಕೈಗೊಂಡಿದೆ ಮಾಹಿತಿ ಒದಗಿಸುವುದು? | **ಪತ್ತೆಯಾಗದ ಮಹಿಳಾ ಮತ್ತು ಮಕ್ಕಳ ಕುರಿತು ಪತ್ತೆಹಚ್ಚಲು ಸರ್ಕಾರ ಕೈಗೊಂಡಿರುವ ಕ್ರಮಗಳು:-**<br>➢ ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಪೀಠದ ಆದೇಶದಂತೆ ನಾಪತ್ತೆ ಪ್ರಕರಣಗಳನ್ನು ದಾಖಲಿಸಿದ ನಂತರ ತನಿಖಾಧಿಕಾರಿಗಳು ಪತ್ತಹಚ್ಚಲು ಕೈಗೊಳ್ಳಬೇಕಾದ / ಅನುಸರಿಸಬೇಕಾದ ಕ್ರಮಗಳ ಕುರಿತು ಪೊಲೀಸ್ ಪ್ರಧಾನ ಕಛೇರಿಯ ಸ್ಥಾಯಿ ಆದೇಶ ಸಂಖ್ಯೆ: 1054 ದಿನಾಂಕ: 21.01.2026 ರಂದು ನಿರ್ದೇಶನ ನೀಡಲಾಗಿದೆ.<br>➢ ಮಕ್ಕಳ ಅಪಹರಣ ಮತ್ತು ಕಾಣೆ ಪ್ರಕರಣಗಳ ತನಿಖೆಯಲ್ಲಿ ಮಾನ್ಯ ಉಚ್ಚ ನ್ಯಾಯಲಯ ಮತ್ತು ಸರ್ವೋಚ್ಚ ನ್ಯಾಲಯಲದ ಆದೇಶಗಳಂತೆ ತನಿಖೆಯನ್ನು ನಿರ್ವಹಿಸುತ್ತಿದ್ದು, ಡಿಜಿ & ಐಜಿಪಿ ಕಛೇರಿಯ SOP ಸಂಖ್ಯೆ CRM-2/224/WP/2018 ದಿ:16/9/2020 ಮತ್ತು ಪೊಲೀಸ್ ಪ್ರಧಾನ ಕಛೇರಿಯ ಸುತ್ತೋಲೆ CRM-2/11/WP/2025 |

| | | |
|---|---|---|
| | | ದಿ:11/10/2025ರ ಆದೇಶಗಳನ್ವಯ ಅಪಹರಣ ಮತ್ತು ಕಾಣೆ ಪ್ರಕರಣಗಳಲ್ಲಿ ತನಿಖೆ ನಿರ್ವಹಿಸಲು ಘಟಕಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿರುತ್ತದೆ.<br>➢ ಕಾಣೆ/ಅಪಹರಣ ಪ್ರಕರಣಗಳು ವರದಿಯಾದ ಕೂಡಲೇ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ಅಪಹರಿಸಿರುವ ಮಗುವಿನ ಬಗ್ಗೆ, ಯಾವುದೇ ಸುಳಿವು ದೊರೆಯದೆ ಇದ್ದಲ್ಲಿ ಪೋಷಕರ ಒಪ್ಪಿಗೆ ಮೇರೆಗೆ ಪತ್ರಿಕಾ ಪ್ರಕಟಣೆ, ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾದ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿ ಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಪತ್ತೆ ಹಚ್ಚುವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ರೀಜಿನಲ್ ಪಾಸ್‌ಪೋರ್ಟ್ ಆಫೀಸ್ ರವರಿಗೆ ಯಾರಾದರೂ ನವಜಾತ ಮಕ್ಕಳಿಗೆ ಪಾಸ್ ಪೋರ್ಟ್ ಅರ್ಜಿ ಸಲ್ಲಿಸಿರುವರೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.<br>➢ ಲುಕ್ ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.<br>➢ ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು.<br>➢ ಮಕ್ಕಳ ಕಳ್ಳಸಾಗಾಣಿಕೆಯಾಗಿರುವ ಸಾಧ್ಯತೆ ಇದ್ದಲ್ಲಿ ಕಳ್ಳಸಾಗಾಣಿಕೆ ಮಾಡುವವರ ಬಗ್ಗೆ ಬಾತ್ಮಿದಾರರಿಂದ ಮಾಹಿತಿ ಸಂಗ್ರಹಿಸಿ ಕಳ್ಳಸಾಗಾಣಿಕೆದಾರರ ವಿರುದ್ಧ ಕಲಂ.370, 370[ಎ] ಐಪಿಸಿ ಮತ್ತು ಇಮ್‌ಮೋರಲ್ ಟ್ರಾಫಿಕಿಂಗ್ ಪ್ರಿವೆನ್ಸ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾನವ ಕಳ್ಳಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗೆ ನಿರ್ದಿಷ್ಟ ಕಾರ್ಯವಿಧಾನವನ್ನು ಸಿದ್ಧಪಡಿಸಿ ರಾಜ್ಯದ ಎಲ್ಲಾ ಘಟಕಾಧಿಕಾರಿಗಳಿಗೆ ಸ್ಥಾಯಿ 1027ರ ಆದೇಶದ ಮೂಲಕ ಕಳುಹಿಸಿಕೊಡಲಾಗಿದೆ.<br>➢ ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಭಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.<br>➢ ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿದ್ದು, ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ. |

| | | |
|---|---|---|
| | | ➢ ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಾಮುತ್ತ ಲಭ್ಯವಿದ್ದ ಸಿಸಿಟಿವಿ ಕ್ಯಾಮೆರದ ಫುಟೇಜ್‌ಗಳನ್ನು ಪರಿಶೀಲನೆ ಮಾಡಲಾಗುತ್ತಿದೆ.<br>➢ ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾನವ ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್‌ಸಿಆರ್‌ಬಿ(ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್‌ಸಿಆರ್‌ಬಿ(ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾನವ ಕಳ್ಳಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.<br>➢ ಮಿಷನ್ ವಾತ್ಸಲ್ಯ ಪೋರ್ಟಲ್, KSP ವೆಬ್ ಸೈಟ್, Cri-MAC ಪೋರ್ಟಲ್ ಮುಂತಾದ ತಾಂತ್ರಿಕ ವಿಧಾನಗಳನ್ನು ಮಕ್ಕಳ ಅಪರಾಧ ಪತ್ತೆ ಮತ್ತು ತಡೆಗಟ್ಟುವಲ್ಲಿ ಬಳಸಿಕೊಳ್ಳಲಾಗುತ್ತಿದೆ.<br>➢ ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರಗಳ ನೋಟೀಸುಗಳನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದವರಿಗೆ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.<br>➢ ರಾಜ್ಯದಲ್ಲಿ ಮಾನವ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ರಾಜ್ಯದಲ್ಲಿ ಒಟ್ಟಾರೆ 43 ಎಹೆಚ್‌ಟಿಯು (Anti Human Trafficking Unit) ಗಳನ್ನು ಸ್ಥಾಪಿಸಲಾಗಿದೆ.<br>➢ ಕಾಣೆಯಾದ ಪ್ರಕರಣಗಳ ಪೈಕಿ 60 ದಿನದೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎಹೆಚ್‌ಟಿಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ಮಾಡವುದು.<br>➢ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. |

**ಸಂಖ್ಯೆ ಹೆಚ್‌ಡಿ 27 ಪಿಸಿಕ್ಯೂ 2026**

(ಡಾ: ಜಿ. ಪರಮೇಶ್ವರ)
ಗೃಹ ಮಂತ್ರಿಗಳು

ಅನುಬಂಧ - 1

| Sl.No. | Unit Name | 2023 | | | 2024 | | | 2025 | | | 2026 (20-02-2026) | | |
|---|---|---|---|---|---|---|---|---|---|---|---|---|---|
| | | Women | | | Women | | | Women | | | Women | | |
| | | Reported | Traced | Untraced | Reported | Traced | Untraced | Reported | Traced | Untraced | Reported | Traced | Untraced |
| 1 | Bagalkot | 205 | 199 | 6 | 246 | 241 | 5 | 262 | 240 | 22 | 39 | 19 | 20 |
| 2 | Ballari | 95 | 87 | 8 | 136 | 130 | 6 | 152 | 122 | 30 | 28 | 3 | 25 |
| 3 | Belagavi City | 166 | 158 | 8 | 157 | 147 | 10 | 152 | 134 | 18 | 36 | 16 | 20 |
| 4 | Belagavi Dist | 404 | 390 | 14 | 385 | 371 | 14 | 426 | 383 | 43 | 106 | 58 | 48 |
| 5 | Bengaluru City | 3433 | 3358 | 75 | 3391 | 3305 | 86 | 3515 | 3318 | 197 | 469 | 287 | 182 |
| 6 | Bengaluru Dist | 673 | 655 | 18 | 767 | 741 | 26 | 870 | 826 | 44 | 98 | 74 | 24 |
| 7 | Bengaluru South | 415 | 406 | 9 | 447 | 436 | 11 | 330 | 314 | 16 | 48 | 37 | 11 |
| 8 | Bidar | 164 | 154 | 10 | 210 | 204 | 6 | 282 | 275 | 7 | 44 | 24 | 20 |
| 9 | Chamarajanagar | 200 | 197 | 3 | 267 | 263 | 4 | 293 | 289 | 4 | 43 | 38 | 5 |
| 10 | Chickballapura | 444 | 441 | 3 | 491 | 485 | 6 | 384 | 376 | 8 | 53 | 44 | 9 |
| 11 | Chikkamagaluru | 269 | 267 | 2 | 239 | 237 | 2 | 229 | 221 | 8 | 42 | 28 | 14 |
| 12 | Chitradurga | 541 | 532 | 9 | 647 | 632 | 15 | 647 | 629 | 18 | 86 | 69 | 17 |
| 13 | Dakshina Kannada | 73 | 73 | 0 | 71 | 70 | 1 | 62 | 59 | 3 | 13 | 11 | 2 |
| 14 | Davanagere | 585 | 573 | 12 | 611 | 599 | 12 | 674 | 645 | 29 | 95 | 81 | 14 |
| 15 | Dharwad | 163 | 159 | 4 | 210 | 206 | 4 | 201 | 193 | 8 | 29 | 18 | 11 |
| 16 | Gadag | 149 | 146 | 3 | 177 | 170 | 7 | 193 | 183 | 10 | 28 | 11 | 17 |
| 17 | Hassan | 283 | 276 | 7 | 329 | 321 | 8 | 341 | 322 | 19 | 54 | 35 | 19 |
| 18 | Haveri | 339 | 330 | 9 | 383 | 379 | 4 | 508 | 484 | 24 | 80 | 39 | 41 |
| 19 | Hubballi Dharwad City | 239 | 234 | 5 | 250 | 243 | 7 | 180 | 169 | 11 | 25 | 14 | 11 |
| 20 | K.G.F | 148 | 146 | 2 | 167 | 166 | 1 | 166 | 161 | 5 | 23 | 22 | 1 |
| 21 | Kalaburagi | 117 | 115 | 2 | 144 | 136 | 8 | 228 | 187 | 41 | 32 | 3 | 29 |
| 22 | Kalaburagi City | 121 | 117 | 4 | 149 | 144 | 5 | 192 | 175 | 17 | 18 | 10 | 8 |
| 23 | Karnataka Railways | 19 | 16 | 3 | 19 | 18 | 1 | 17 | 16 | 1 | 1 | 0 | 1 |
| 24 | Kodagu | 120 | 118 | 2 | 128 | 127 | 1 | 121 | 114 | 7 | 18 | 15 | 3 |
| 25 | Kolar | 453 | 448 | 5 | 401 | 396 | 5 | 382 | 365 | 17 | 51 | 43 | 8 |
| 26 | Koppal | 158 | 153 | 5 | 185 | 183 | 2 | 247 | 236 | 11 | 35 | 9 | 26 |
| 27 | Mandya | 466 | 462 | 4 | 423 | 409 | 14 | 485 | 462 | 23 | 66 | 55 | 11 |
| 28 | Mangaluru City | 94 | 92 | 2 | 93 | 92 | 1 | 89 | 86 | 3 | 9 | 4 | 5 |
| 29 | Mysuru City | 244 | 239 | 5 | 256 | 251 | 5 | 233 | 222 | 11 | 23 | 15 | 8 |
| 30 | Mysuru Dist | 429 | 422 | 7 | 496 | 486 | 10 | 604 | 561 | 43 | 80 | 64 | 16 |
| 31 | Raichur | 209 | 201 | 8 | 193 | 189 | 4 | 277 | 259 | 18 | 42 | 33 | 9 |
| 32 | Shivamogga | 496 | 488 | 8 | 546 | 531 | 15 | 544 | 521 | 23 | 75 | 36 | 39 |
| 33 | Tumakuru | 617 | 605 | 12 | 691 | 678 | 13 | 752 | 730 | 22 | 103 | 81 | 22 |
| 34 | Udupi | 91 | 91 | 0 | 111 | 108 | 3 | 73 | 70 | 3 | 12 | 8 | 4 |
| 35 | Uttara Kannada | 247 | 242 | 5 | 234 | 231 | 3 | 190 | 185 | 5 | 33 | 14 | 19 |
| 36 | Vijayanagara | 160 | 154 | 6 | 183 | 179 | 4 | 218 | 196 | 22 | 20 | 3 | 17 |
| 37 | Vijayapura | 293 | 285 | 8 | 339 | 328 | 11 | 399 | 368 | 31 | 60 | 19 | 41 |
| 38 | Yadgir | 70 | 70 | 0 | 100 | 97 | 3 | 109 | 99 | 10 | 18 | 10 | 8 |
| Grand Total | | 13392 | 13099 | 293 | 14272 | 13929 | 343 | 15027 | 14195 | 832 | 2135 | 1350 | 785 |

Women Missing Cases

ಅನುಬಂಧ - 2

| Sl.No. | Unit Name | Missing Girl (363 IPC/ 137 (2) BNS) | | | | | | | | | | | |
|---|---|---|---|---|---|---|---|---|---|---|---|---|---|
| | | 2023 | | | 2024 | | | 2025 | | | 2026 (20-02-2026) | | |
| | | Girl | | | Girl | | | Girl | | | Girl | | |
| | | Reported | Traced | untraced | Reported | Traced | untraced | Reported | Traced | untraced | Reported | Traced | untraced |
| 1 | Bagalkot | 13 | 13 | 0 | 27 | 27 | 0 | 18 | 14 | 4 | 6 | 0 | 6 |
| 2 | Ballari | 29 | 29 | 0 | 27 | 26 | 1 | 31 | 26 | 5 | 5 | 0 | 5 |
| 3 | Belagavi City | 25 | 25 | 0 | 29 | 26 | 3 | 31 | 23 | 8 | 7 | 1 | 6 |
| 4 | Belagavi Dist | 59 | 57 | 2 | 38 | 35 | 3 | 53 | 44 | 9 | 15 | 5 | 10 |
| 5 | Bengaluru City | 758 | 739 | 19 | 816 | 779 | 37 | 817 | 594 | 223 | 113 | 15 | 98 |
| 6 | Bengaluru Dist | 153 | 152 | 1 | 188 | 181 | 7 | 181 | 152 | 29 | 22 | 8 | 14 |
| 7 | Bengaluru South | 77 | 76 | 1 | 72 | 71 | 1 | 84 | 80 | 4 | 8 | 3 | 5 |
| 8 | Bidar | 18 | 18 | 0 | 37 | 36 | 1 | 63 | 50 | 13 | 11 | 0 | 11 |
| 9 | Chamarajanagar | 22 | 22 | 0 | 19 | 18 | 1 | 26 | 17 | 9 | 6 | 0 | 6 |
| 10 | Chickballapura | 28 | 28 | 0 | 37 | 36 | 1 | 29 | 19 | 10 | 6 | 1 | 5 |
| 11 | Chikkamagaluru | 53 | 53 | 0 | 54 | 54 | 0 | 74 | 59 | 15 | 7 | 1 | 6 |
| 12 | Chitradurga | 60 | 59 | 1 | 73 | 72 | 1 | 67 | 61 | 6 | 18 | 0 | 18 |
| 13 | Dakshina Kannada | 8 | 8 | 0 | 16 | 16 | 0 | 9 | 9 | 0 | 1 | 0 | 1 |
| 14 | Davanagere | 63 | 63 | 0 | 82 | 82 | 0 | 76 | 61 | 15 | 13 | 3 | 10 |
| 15 | Dharwad | 10 | 10 | 0 | 9 | 9 | 0 | 22 | 22 | 0 | 3 | 1 | 2 |
| 16 | Gadag | 22 | 21 | 1 | 21 | 21 | 0 | 21 | 17 | 4 | 4 | 1 | 3 |
| 17 | Hassan | 49 | 47 | 2 | 69 | 66 | 3 | 85 | 70 | 15 | 18 | 0 | 18 |
| 18 | Haveri | 40 | 40 | 0 | 30 | 28 | 2 | 38 | 27 | 11 | 14 | 3 | 11 |
| 19 | Hubballi Dharwad City | 26 | 26 | 0 | 29 | 28 | 1 | 23 | 18 | 5 | 2 | 0 | 2 |
| 20 | K.G.F | 4 | 4 | 0 | 22 | 21 | 1 | 15 | 14 | 1 | | 0 | 0 |
| 21 | Kalaburagi | 35 | 33 | 2 | 49 | 47 | 2 | 48 | 31 | 17 | 10 | 1 | 9 |
| 22 | Kalaburagi City | 19 | 19 | 0 | 35 | 34 | 1 | 35 | 34 | 1 | 3 | 0 | 3 |
| 23 | Karnataka Railways | 1 | 1 | 0 | 3 | 2 | 1 | 3 | 1 | 2 | | 0 | 0 |
| 24 | Kodagu | 32 | 31 | 1 | 29 | 29 | 0 | 30 | 29 | 1 | 8 | 6 | 2 |
| 25 | Kolar | 52 | 51 | 1 | 56 | 56 | 0 | 56 | 48 | 8 | 9 | 5 | 4 |
| 26 | Koppal | 18 | 18 | 0 | 26 | 23 | 3 | 28 | 22 | 6 | 4 | 1 | 3 |
| 27 | Mandya | 68 | 68 | 0 | 65 | 63 | 2 | 57 | 53 | 4 | 9 | 0 | 9 |
| 28 | Mangaluru City | 22 | 22 | 0 | 27 | 27 | 0 | 19 | 18 | 1 | 8 | 0 | 8 |
| 29 | Mysuru City | 31 | 29 | 2 | 39 | 38 | 1 | 45 | 40 | 5 | 12 | 1 | 11 |
| 30 | Mysuru Dist | 38 | 36 | 2 | 68 | 62 | 6 | 118 | 86 | 32 | 16 | 2 | 14 |
| 31 | Raichur | 19 | 18 | 1 | 31 | 30 | 1 | 30 | 27 | 3 | 7 | 1 | 6 |
| 32 | Shivamogga | 74 | 72 | 2 | 67 | 64 | 3 | 75 | 61 | 14 | 14 | 1 | 13 |
| 33 | Tumakuru | 112 | 111 | 1 | 113 | 112 | 1 | 144 | 134 | 10 | 17 | 0 | 17 |
| 34 | Udupi | 17 | 17 | 0 | 16 | 16 | 0 | 18 | 16 | 2 | 3 | 1 | 2 |
| 35 | Uttara Kannada | 22 | 21 | 1 | 39 | 39 | 0 | 46 | 41 | 5 | 4 | 1 | 3 |
| 36 | Vijayanagara | 25 | 25 | 0 | 32 | 32 | 0 | 38 | 35 | 3 | 11 | 3 | 8 |
| 37 | Vijayapura | 23 | 23 | 0 | 25 | 22 | 3 | 58 | 45 | 13 | 8 | 1 | 7 |
| 38 | Yadgir | 8 | 8 | 0 | 18 | 18 | 0 | 9 | 7 | 2 | 4 | 0 | 4 |
| | Grand Total | 2133 | 2093 | 40 | 2433 | 2346 | 87 | 2620 | 2105 | 515 | 426 | 66 | 360 |